ವಯಸ್ಸಿನವರು ಅದೂ ಒಂದು ಹೆಣ್ಣು ರೈಲಿನ ಡ್ರೈವರ್ ಆಗಿ ಇರುತ್ತಾರೆ ಎಂದು ನನಗೆ ಆಗಲೇ ಗೊತ್ತಾದದ್ದು.

ಇದು ಮಂಗಳೂರಿನಿಂದ ಮುಂಬಯಿಗೆ ರೈಲಿನಲ್ಲಿ ಹೋದಾಗ ಕಂಡ ದೃಶ್ಯ. ನನ್ನ ಎದುರು ಸೀಟಿನಲ್ಲಿ ಸುಮಾರು ಮೂವತ್ತರ ವಯಸ್ಸಿನ ಮಹಿಳೆಯೊಬ್ಬಳು ಕೂತಿದ್ದಳು. ಅವಳ ಮಡಿಲಲ್ಲಿ ಪಮೋರಿಯನ್ ನಾಯಿ ಇತ್ತು. ನಾಯಿಗೂ ರೈಲುಸಂಚಾರದ ಭಾಗ್ಯ ದಕ್ಕುತ್ತದೆ ಎಂದು ನನಗೆ ಅಲ್ಲಿ ತಿಳಿಯಿತು. ವಿಷಯ ಅದಲ್ಲ. ಪಕ್ಕದಲ್ಲಿ ಅವಳ ಪುಟ್ಟ ಮಗಳಿದ್ದಳು. ಅವಳು ಮಗಳನ್ನು ಮುದ್ದು ಮಾಡದೆ ಆ ನಾಯಿಯನ್ನೇ ಮುದ್ದು ಮಾಡುತ್ತಿದ್ದಳು. ಅದಕ್ಕೆ ಬಟ್ಟಲಿನಲ್ಲಿ ಹಾಲು ಹೊಯ್ದು ಕುಡಿಸುವುದೇನು? ಬಿಸ್ಕೆಟ್ ತಿನಿಸುವುದೇನು? ಪಾಪ! ಆ ಮಗು ಪಿಳಿಪಿಳಿ ಕಣ್ಣು ಬಿಡುತ್ತಾ ತಾಯಿಯನ್ನೂ, ನಾಯಿಯನ್ನೂ ನೋಡುತ್ತಿತ್ತು.

ಇನ್ನು ಪುತ್ತೂರುಕಬಕದಲ್ಲಿ ರೈಲು ಹತ್ತಿ ಚಾರ್ಮಾಡಿ ಘಾಟಿಯಾಗಿ ಹುಬ್ಬಳ್ಳಿ ಸೇರುವ ಪಯಣವಂತೂ ಮೈನವಿರೇಳಿಸುವಂತದ್ದು. ಹಲವು ಬಾರಿ ಸೇತುವೆಗಳನ್ನು, ಉದ್ದಾನುದ್ದದ ಕಾರ್ಗತ್ತಲೆಯ ಸುರಂಗ ಮಾರ್ಗಗಳನ್ನು ಹಾದುಹೋಗುವ ಪಯಣ ಅದು. ಹಸಿರು ಹೊದ್ದ ಚಾರ್ಮಾಡಿ ಘಾಟಿಯ ಪ್ರಕೃತಿ ಸೌಂದರ್ಯ ಅತ್ಯಂತ ರಮಣೀಯವಾದುದು.

ಇಷ್ಟೆಲ್ಲ ಸೌಕರ್ಯಗಳಿರುವ ರೈಲಿನಲ್ಲಿ ಒಂದು ಕೊರತೆ ಇದೆ. ಅದೆಂದರೆ ಬಸ್ಸಿನಲ್ಲಿ ಊರು ಬಂದಾಗ ಊರಿನ ಹೆಸರನ್ನು ಕರೆದು ಹೇಳುವ ಕಂಡಕ್ಟರ್ ಇರುವಂತೆ ರೈಲಿನಲ್ಲಿ ಯಾರೂ ಇರುವುದಿಲ್ಲ. ಕಂಡಕ್ಟರ್ ಇಲ್ಲದೆ ಇರುವುದರಿಂದ ನಮಗೆ ರೈಲಿನಲ್ಲಿ ಯಾವ ಸ್ಟೇಷನ್ ಬಂತು ಎಂದು ಹೊರಗೆ ಬೋರ್ಡ್ ನೋಡಿಯೇ ಗೊತ್ತಾಗಬೇಕಷ್ಟೆ.ರಾತ್ರಿ ಇಳಿಯುವುದಿದ್ದರೆ ನಾವು ಗಾಢ ನಿದ್ರೆಯಲ್ಲಿದ್ದರೆ ಹೇಳುವವರಿಲ್ಲದೆ ನಾವು ಇಳಿಯುವ ಸ್ಟೇಷನ್ ದಾಟಿ ರೈಲು ಮುಂದೆ ಹೋಗಿರುತ್ತದೆ. ರೈಲಿನಲ್ಲಿ ಇಳಿಯುವ ಜಾಗ ಬಂದಾಗ ದೀರ್ಘ ನಿದ್ರೆಯಲ್ಲಿದ್ದು ಸ್ಟೇಷನ್ ದಾಟಿದ ಮೇಲೆ ಎಚ್ಚರವಾದ ಪ್ರಸಂಗ ನನಗೆ ಒಂದೆರಡು ಸಾರಿ ಆಗಿದೆ.

ಮೆಟ್ರೋ ಇದಕ್ಕೊಂದು ಅಪವಾದ. ಅದರಲ್ಲಿ ಕಂಡಕ್ಟರ್ ಇಲ್ಲದಿದ್ದರೂ ಪ್ರತಿ ಸ್ಟೇಷನ್ ಬರುವಾಗಲೂ ಯಾವ ಊರೆಂದು ತಿಳಿಸುವ ಧ್ವನಿವರ್ಧಕ ವ್ಯವಸ್ಥೆ ಇರುತ್ತದೆ. ಈ ವ್ಯವಸ್ಥೆಯನ್ನು ಎಲ್ಲ ರೈಲುಗಳಿಗೂ ವಿಸ್ತರಿಸಿದರೆ ಚೆನ್ನಾಗಿರುತ್ತಿತ್ತು. ಊರೂರು ನಾನು ರೈಲಲ್ಲಿ ಸುತ್ತಿದರೂ ನನ್ನೂರಾದ ಕೊಡಗಿನಲ್ಲಿ ಸುತ್ತಲಿಲ್ಲ. ಕಾರಣ ಇಲ್ಲಿ ರೈಲುಮಾರ್ಗವೇ ಇಲ್ಲ. ಇಡೀ ಭಾರತ ದೇಶದಲ್ಲಿ ರೈಲಿಲ್ಲದ ಜಿಲ್ಲೆ ಎಂದರೆ ಕೊಡಗೇ ಇರಬಹುದಾ ಎಂದು ನನಗೊಂದು ಅನುಮಾನ. ಹೇಳಿಕೇಳಿ ಇದು ಹೊಳೆ, ಜಲಪಾತ, ಬೆಟ್ಟಗುಡ್ಡ, ಅರಣ್ಯವನ್ನು ಆವರಿಸಿದ ಜಿಲ್ಲೆ. ಮಳೆಗಾಲ ಬಂದರೆ ಸಾಕು ಬೆಟ್ಟ ಕುಸಿತ, ಹೊಳೆ ದಿಕ್ಕು ಬದಲಿಸುವುದು, ಪ್ರವಾಹ ಎಲ್ಲವನ್ನೂ ಕೇಳುವಾಗ ರೈಲುಪ್ರಯಾಣ



ನನಗೆ ಇಷ್ಟವೇ ಆದರೂ ನನ್ನೂರಿನ ಹಸಿರು ಬಗೆದು ರೈಲು ಮಾರ್ಗವನ್ನು ನಿರ್ಮಿಸದಿರುವುದು ಒಳ್ಳೆಯದೇ ಆಯಿತು ಎಂದು ಅಂದುಕೊಂಡಿದ್ದೇನೆ.

ರೈಲು ಓದುಗಸ್ನೇಹಿ ವಾಹನ. ಓದುವಾಗ ಇತರ ವಾಹನಗಳಲ್ಲಿ ಕಣ್ಣಿಗೆ ಶ್ರಮ ಬೀಳುವಂತೆ ರೈಲಿನಲ್ಲಿ ಬೀಳುವುದಿಲ್ಲ. ಮನೆಯಲ್ಲಿ ಸಮಯದ ಅಭಾವದಿಂದ ಓದಲಾಗದೆ ಇದ್ದ ಎಷ್ಟೋ ಪುಸ್ತಕಗಳನ್ನು ದೀರ್ಘ ರೈಲು ಯಾನದಲ್ಲಿ ಓದಿ ಮುಗಿಸಿದ್ದೇನೆ. ಹೀಗೆ ಹೇಳುತ್ತಾ ಹೋದರೆ ರೈಲು ಪಯಣದ ಅನುಭವ ಮುಗಿಯದ ಕತೆ. ಪ್ರತಿ ಸಾರಿ ರೈಲು ಪ್ರಯಾಣ ಮಾಡಿ ರೈಲಿನಿಂದ ಹೊರಗೆ ಬರುವಾಗ ಇನ್ನು ಮುಂದಿನ ಪ್ರಯಾಣ ಯಾವಾಗ ಎಂದು ನನಗೆ ನಾನೇ ಕೇಳಿಕೊಳ್ಳುತ್ತಿರುತ್ತೇನೆ. ಸುಖ ಪ್ರಯಾಣಕ್ಕಾಗಿ ರೈಲಿಗೊಂದು ಸಲಾಂ. ●